ಚರ್ಚೆ ಬಂದಾಗ ಚಂದ್ರನ ಬಗ್ಗೆ ಬರುವ ಪದ್ಯದ ಸಾಲುಗಳು ನೆನಪಾಗಿ ಹಾಡತೊಡಗಿದ.

ಚಂದ್ರನೆಂಬೋ ಗ್ರಹ ತಾನೂ
ಎಂದೂ ಸೌಖ್ಯ ಕೊಡುವೋನೂ
ಇಂದು ಶಾಂತರೂಪ ಕೇಳಯ್ಯಾ
ಓ ವಿಕ್ರಮರಾಜಾ...

ಹೀಗೆ ಹಾಡುತ್ತಾ ಊರಿನೊಳಗೆ ಅಡಿ ಇಟ್ಟ. ಊರ ದೇವಸ್ಥಾನದ ಮುಂದೆ ಕಟ್ಟೆಯ ಮೇಲೆ ಐದಾರು ಜನರು ಕುಳಿತಿದ್ದರು. ಗಂಗಿರೆಡ್ಡಿಯ ಹಾಡು ಕೇಳುತ್ತಿದ್ದಂತೆ ಒಬ್ಬ 'ಯಾರು ಕೇಳತಾರಂತ ಹಾಡ್ತೀಯಣ್ಣ? ಈ ಕಾಲ್ದಾಕ ನಿಮ್ಮಂತೋರಿಗೆಲ್ಲಾ ಬೆಲೆ ಇಲ್ಲ. ಸುಮ್ಕೆ ಬೇರೆ ಏನಾರ ಕೆಲಸ ಮಾಡ್ಬಾರ್ದ?' ಎಂದು ಕೇಳಿದ. ಆ ಗುಂಪಿಗೆ ತಾನು ತನಗೋಸ್ಕರ ಹಾಡ್ಕೋತೀನಿ. ಮರ ಗಿಡಗಳು ಕೇಳ್ತಾವಂತ ಹಾಡ್ತೀನಿ. ಪಕ್ಷಿಗಳು ಇರುವೆಗಳು ಕೇಳ್ತಾವಂತ ಹಾಡ್ತೀನಿ. ನಾಯಿಗಳೂ ಕೇಳ್ತಾವಂತ ಹಾಡ್ತೀನಿ ಎಂದು ಜೋರಾಗಿ ಹೇಳಬೇಕನಿಸಿತು. ಅದಕ್ಕವರು ಸುಮ್ಮನೆ ಹಂಗಿಸುವಂತೆ ನಕ್ಕುಬಿಟ್ಟರೆ ಎಂದನಿಸಿ ಸುಮ್ಮನಾದ. ಅಷ್ಟರಲ್ಲಿ ಒಬ್ಬ ಗಂಗಿರೆಡ್ಡಿ ಬಂದ ದೆಸೆಯಿಂದ ನಿಂತ ಚರ್ಚೆಯನ್ನು ಮುಂದುವರೆಸಿ 'ಆ ಹಳೇ ಸೀಯಮ್ಮು ಆ ಸ್ಕ್ಯಾಮಲ್ಲಿ ಸಾವಿರಾರು ಕೋಟಿ ಲಪಟಾಯಿಸಿದ್ನಂತೋ... ಅದಕ್ಕೇ ಅವನ್ನ ಅರೆಸ್ಟು ಮಾಡಿರೋದು' ಎಂದು ನುಡಿದ. ಅಷ್ಟರಲ್ಲಿ ಗಂಗಿರೆಡ್ಡಿ 'ರಾಜ ಅಂದ್ರೆ ಯಂಗಿರ್ಬೇಕು ಗೊತ್ತ. ಅದೇ ಶನಿಮಾತ್ಮನ ಕಥೆನಾಗ ವಿಕ್ರಮರಾಜ ಬರ್ತಾನಲ್ಲ...' ಎಂದು ಶುರುಮಾಡಿದ. ಒಂದಿಬ್ಬರು 'ಓ... ಮತ್ತೆ ಸುರುವಾಯ್ತು' ಎಂದು ಗೊಣಗಲು ಶುರು ಮಾಡಿದರು. ಅಷ್ಟರಲ್ಲಿ ಮತ್ತೊಬ್ಬ 'ಏಯ್... ಹೇಳ್ಲಿ ಸುಮ್ಕಿರ್ರೋ... ನೀ ಯೇಳು ಗಂಗಣ್ಣ' ಎಂದು ನುಡಿದ. ಗಂಗಿರೆಡ್ಡಿಗೆ ಎಲ್ಲಿಲ್ಲದ ಹುರುಪು ಬಂದಂತಾಗಿ ದೇವಸ್ಥಾನದ ಕಡೆಗೆ ನೋಡಿದ. ಅದು ಕೃತಕ ಬೆಳಕಿನಲ್ಲಿ ಸಿಂಗಾರಗೊಂಡಿತ್ತು. ವಿದ್ಯುತ್ತಿನ ಪ್ರಭೆ ದೇವಸ್ಥಾನವನ್ನು ಸುತ್ತುವರೆದಿತ್ತು. ಗಂಗಿರೆಡ್ಡಿ ಮತ್ತೆ 'ಕೈಕಾಲು ಕಳಕೊಂಡ ವಿಕ್ರಮರಾಜ ಶನಿದೇವ ಕೊಟ್ಟ ಎಲ್ಲ ಕಷ್ಟಗಳನ್ನು ಸಯಿಸಿ ಗೆದ್ದಿರ್ತಾನೆ. ಆಗ ಶನಿದೇವನಿಗೆ ಕುಶಿಯಾಗಿ ಪ್ರತ್ಯಕ್ಷ ಆಗ್ತಾನೆ. ಆಗಿ ವಿಕ್ರಮರಾಜನ್ನ ಏನ್ ವರ ಬೇಕೋ ಕೇಳ್ಕೋ ಅಂತ ಕೇಳ್ತಾನೆ. ಆಗ... ವಿಕ್ರಮರಾಜ ಏನಂತ ಕೇಳ್ತಾನೆ ಗೊತ್ತೇನ್ರೋ? ಹೋಗಿರೋ ಕೈಕಾಲು ಕೇಳಲ್ಲ. ಕಳಕೊಂಡಿರೋ ರಾಜ್ಯಾನ ಕೇಳಲ್ಲ. ಹೆಂಡ್ತಿ ಮಕ್ಕಳನ್ನ ಕೇಳಲ್ಲ... ಏನ್ ಕೇಳ್ತಾನೆ ಗೊತ್ತೇನ್ರೊ? ಅವ್ನ ರಾಜ್ಯದಲ್ಲಿರೋ ಜನಗಳುಕೆ ಯಾವ್ದೇ ಕಷ್ಟ ಕೊಡಬಾರ್ದು... ಅವ್ರೆಲ್ಲಾ ಸುಕದಿಂದಿರಬೇಕು ಅಂತ ಕೇಳ್ತಾನೆ' ಎಂದು ನುಡಿದು ಮತ್ತೆ ದೇವಸ್ಥಾನದ ಕಡೆಗೆ ನೋಡಿದ. ಅವರಲ್ಲೊಬ್ಬ 'ಗಂಗಣ್ಣ, ನಿನ್ನ ರಾಜನುಕೆ ಬುದ್ದಿ ನೆಟ್ಟಗಿರಲಿಲ್ಲ ಅಂತ ಕಾಣುತ್ತೆ... ಜೊತೇಕೆ ನಿನ್ನ ಆ ಶನಿದೇವನ್ಗು ಬೇರೆ ಕೆಲುಸ ಇಲ್ಲ ಅಂತ ಕಾಣುತ್ತೆ' ಎಂದು ನುಡಿದು ನಗತೊಡಗಿದ. ಉಳಿದವರೂ ಅವನ ನಗುವಿನಲ್ಲಿ ತೇಲತೊಡಗಿದರು. ಗಂಗಿರೆಡ್ಡಿ ಒಂದು ಕ್ಷಣ ಸುಮ್ಮನಿದ್ದು ನಂತರ 'ಲೇ, ಶನಿಮಾತ್ಮನ ಕಥೇನ ಸುಲುಕನ ಮಾಡ್ತೀರ. ಶನಿ ಇಲ್ಲೆ ಮೇಲೆ ಓಡಾಡ್ತಾ ಇರತಾನೆ... ಲೇದಂದ್ರೆ ಇಲ್ಲೆ ಈ ಮರದ ಮೇಕೆ ಕಾಗೆ ರೂಪದಾಗ ಕೂತಿರ್ತಾನೆ. ನಿನ್ನ ಸುಮ್ಕೆ ಬಿಡಾಕಿಲ್ಲ. ಆ ವಿಕ್ರಮರಾಜನ್ಗು ಹಾಗೆ ಆಗಿದ್ದು' ಎಂದು ನುಡಿದ. ಅವರು ನಗುತ್ತಲೇ ಇದ್ದರು. ಗಂಗಿರೆಡ್ಡಿ 'ಇಂತೆಂದು ವಿಕ್ರಮರಾಯನು ಶನಿದೇವರನ್ನು ಹೀಯಾಳಿಸಿ ತಾನು ಗರ್ಜಿಸಿ ನಗುವಂಥ ಸಮಯದಿ ಆದ ಚಮತ್ಕಾರವನ್ನು ಪೇಳುತ್ತಿರ್ದಾರೆನೆದೆಂತನೇ...' ಎಂದು ಹಾಡಿಕೊಳ್ಳುತ್ತಾ ಮನೆಯ ಕಡೆಗೆ ನಡೆದ.

ಗಂಗಿರೆಡ್ಡಿ ಅಂದಾಜು ತನ್ನ ಹದಿನೆಂಟನೇ ವಯಸ್ಸಿಗೆ ಶನಿಮಹಾತ್ಮೆ ಪಾರಾಯಣ ಮಾಡಲು ಕಲಿತದ್ದು. ಗಂಗರಾಜು ಗುರುಗಳ ಜೊತೆಗೆ ಪಾರಾಯಣ ಮಾಡಲೆಂದು ಇದ್ದ ವ್ಯಕ್ತಿಯ ಮರಣದ ನಂತರ ಅವರು ಆರಿಸಿಕೊಂಡಿದ್ದೇ ಗಂಗಿರೆಡ್ಡಿಯನ್ನು. ಹೊಲಗಳಲ್ಲಿ ಏನನ್ನಾದರೂ ರಾಗವಾಗಿ ಹಾಡುತ್ತ ಕೆಲಸ ಮಾಡುತ್ತಿದ್ದ ಗಂಗಿರೆಡ್ಡಿಯನ್ನು ಗಮನಿಸಿದ್ದ ಗಂಗರಾಜು, ಇವನೇ ಸರಿ ಎಂದು ಆರಿಸಿದ್ದು. ಜೊತೆಗೆ ಗಂಗಿರೆಡ್ಡಿ ಹತ್ತನೇ ತರಗತಿಯಲ್ಲಿ ಅನುತ್ತೀರ್ಣಗೊಂಡಿದ್ದ. ಆದ್ದರಿಂದ ಅವನ ಅಣ್ಣ 'ಇಸ್ಕೂಲು ಇನ್ನು ಸಾಕು' ಎಂದು ಹೇಳಿ ಹೊಲದ ಕೆಲಸಕ್ಕೆ ಹಚ್ಚಿದ್ದ. ಹೇಗೂ ಗಂಗಿರೆಡ್ಡಿಗೆ ಓದಲು ಬರುತ್ತೆ. ರಾಗವಾಗಿಯೂ ಹಾಡುತ್ತಾನೆ. ಜೊತೆಗೆ ಶನಿಮಾತ್ಮನ ಕಥೆಯನ್ನು ಹಾಡಿದರೆ ಪುಣ್ಯಾನೂ ಬರುತ್ತೆ ಎಂದು ಗಂಗಿರೆಡ್ಡಿಯ ಅಣ್ಣನನ್ನು ಗಂಗರಾಜು ಒಪ್ಪಿಸಿದ್ದ. ಮತ್ತು ಬಹಳ ಬೇಗನೆ ಶನಿಮಹಾತ್ಮೆ ಕಥೆಯಲ್ಲಿನ